ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 5, November-December 2025, Pp. 11-18
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಐತಿಹಾಸಿಕ ಕಾದಂಬರಿಗಳಲ್ಲಿ ಮುಕ್ತತೆಯ ಮಾದರಿಯಾಗಿ ಅಕ್ಕಮಹಾದೇವಿ

**ಪೂಜಿತ ಪಿ.ಎಲ್**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

***Abstract:***
*ಹನ್ನೆರಡನೆಯ ಶತಮಾನದ ವಚನ ಚಳುವಳಿಯ ಮುಖ್ಯ ಆಶಯಗಳಲ್ಲಿ ಒಂದು ಹಳೆಯ ಗೊಡ್ಡು ಸಂಪ್ರದಾಯಗಳನ್ನು, ಸಾಮಾಜಿಕ ಒಪ್ಪಂದಗಳನ್ನು ಮುರಿದು ನವೀನತೆಯನ್ನು ಮತ್ತು ವೈಚಾರಿಕತೆಯನ್ನು ತರುವುದಾಗಿದೆ. ಈ ಹಿನ್ನೆಲೆಯಲ್ಲಿ ಅಕ್ಕಮಹಾದೇವಿ ಕೇವಲ ಇತಿಹಾಸ ಪಾತ್ರವಾಗಿ ಮಾತ್ರ ಉಳಿಯದೆ, ವರ್ತಮಾನದಲ್ಲೂ ಸ್ತ್ರೀಯರಿಗೆ ಜ್ವಲಂತ ಸಮಸ್ಯೆಗಳ ವಿರುದ್ಧ ಹೋರಾಡಲು ಆತ್ಮಸ್ಥೈರ್ಯ ತುಂಬಬಲ್ಲ ನವೀನ ಶಕ್ತಿಯಾಗಿದ್ದಾಳೆ. ಕಾಯದ ಕುರಿತು ಹೊಸ ನಿರೂಪಣೆಯನ್ನು ಮತ್ತು ಸ್ತ್ರೀಯರ ಮೇಲೆ ಬಲವಂತದಿಂದ ಹೇರಲ್ಪಟ್ಟ ಅನೇಕ ಅರ್ಥಹೀನ ನಂಬಿಕೆಗಳನ್ನು ಒಡೆದು ಹಾಕಿ ಮುಕ್ತತೆಯ ಮಾದರಿಯೆನಿಸಿರುವುದನ್ನು ಐತಿಹಾಸಿಕ ಕಾದಂಬರಿಗಳಲ್ಲಿ ಗುರುತಿಸಬಹುದಾಗಿದೆ. ಪ್ರಸ್ತುತ ಲೇಖನದಲ್ಲಿ ಐತಿಹಾಸಿಕ ಕಾದಂಬರಿಗಳನ್ನು ಮುಖ್ಯ ಆಕರವಾಗಿಟ್ಟುಕೊಂಡು ಅಕ್ಕಮಹಾದೇವಿಯನ್ನು ಮುಕ್ತತೆಯ ಮಾದರಿಯಾಗಿ ಗುರುತಿಸಿ ವಿಶ್ಲೇಷಿಸಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ಐತಿಹಾಸಿಕ ಕಾದಂಬರಿ, ಅಕ್ಕಮಹಾದೇವಿ.*

## ಪೀಠಿಕೆ

ಅಕ್ಕಮಹಾದೇವಿಯನ್ನು ಕುರಿತ ಎರಡು ಚಾರಿತ್ರಿಕ ಘಟನೆಗಳೆಂದರೆ ಒಂದು ಇಷ್ಟವಿಲ್ಲದ ವೈವಾಹಿಕ ಬಂಧನದಿಂದ ಹೊರ ಬಂದಿರುವುದು ಮತ್ತೊಂದು ಲೋಕರೂಢಿಯಾದ ವಸ್ತ್ರದ ಮರೆಯನ್ನು ತ್ಯಜಿಸಿ ನಗ್ನಳಾಗಿರುವುದು. ಈ ಎರಡು ಸಂಗತಿಗಳು ಹೆಣ್ಣಿನ ಮೇಲೆ ಸಂಪ್ರದಾಯದ ಹೆಸರಿನಲ್ಲಿ ಹೇರಲ್ಪಡುವ ಆಚರಣೆಗಳು ಮತ್ತು ಪುರುಷ ಸಮಾಜದ ದಬ್ಬಾಳಿಕೆ ಹಾಗೂ ದೇಹವನ್ನು ಮೀರಿದ ವ್ಯಕ್ತಿತ್ವದ ಅಸ್ತಿತ್ವವನ್ನು ಪ್ರತಿಬಿಂಬಿಸುತ್ತದೆ. ಆ ಮೂಲಕ ಅಕ್ಕಮಹಾದೇವಿ ದೈಹಿಕ, ಮಾನಸಿಕ ಬಂಧನಗಳಿಂದ ಹೊರಬಂದು, ಮುಕ್ತತೆಯನ್ನು ನಿರ್ಮಿಸಿರುವುದನ್ನು ಕಾಣಬಹುದಾಗಿದೆ.

## ಅಕ್ಕಮಹಾದೇವಿ ಕುರಿತ ಐತಿಹಾಸಿಕ ಕಾದಂಬರಿಗಳು

ನಡುಗನ್ನಡ ಸಾಹಿತ್ಯದ ವಚನ, ರಗಳೆ, ಸಾಂಗತ್ಯ ತ್ರಿಪದಿಗಳಲ್ಲಿ ವ್ಯಾಪಿಸಿರುವ ಅಕ್ಕಮಹಾದೇವಿಯ ವ್ಯಕ್ತಿತ್ವವನ್ನು ಆಧರಿಸಿ ಹೊಸಗನ್ನಡದಲ್ಲಿ ಐತಿಹಾಸಿಕ ಕಾದಂಬರಿಗಳು ರಚನೆಗೊಂಡಿವೆ. ಅವುಗಳಲ್ಲಿ ಬಸವರಾಜ ಕಟ್ಟೀಮನಿಯವರ 'ಗಿರಿಯ ನವಿಲು', ಎಚ್.ತಿಪ್ಪೇರುದ್ರಸ್ವಾಮಿಯವರ 'ಕದಳಿಯ ಕರ್ಪೂರ', ಜಗದ್ಗುರು ಮಾತೆ ಮಹಾದೇವಿಯವರ 'ತರಂಗಿಣಿ', ಸು.ರುದ್ರಮೂರ್ತಿ ಶಾಸ್ತ್ರಿಯವರ 'ಅಕ್ಕಮಹಾದೇವಿ', ಡಾ.ಲಕ್ಷ್ಮಣ ಕೌಂಟೆಯವರ 'ಮಹಾಸಂಗಮ', ವಿ.ಮಾ.ಜಗದೀಶ್‌ರವರ 'ರೂಹಿಲ್ಲದ ಚೆಲುವ', ಡಾ.ಎಚ್.ಎಸ್.ಅನುಪಮಾ ಅವರ 'ಬೆಳಗಿನೊಳಗು ಮಹಾದೇವಿಯಕ್ಕ' ಕಾದಂಬರಿಗಳು

***Please cite this article as:*** ಪೂಜಿತ, ಪಿ.ಎಲ್. (2025). ಐತಿಹಾಸಿಕ ಕಾದಂಬರಿಗಳಲ್ಲಿ ಮುಕ್ತತೆಯ ಮಾದರಿಯಾಗಿ ಅಕ್ಕಮಹಾದೇವಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 4(5), 11–18

ವಿಶೇಷವಾದುದಾಗಿದ್ದು ಅಕ್ಕಮಹಾದೇವಿಯ ವೈವಿಧ್ಯಪೂರ್ಣ ಬದುಕನ್ನು ಚಿತ್ರಿಸಿರುವುದನ್ನು ಕಾಣಬಹುದಾಗಿದೆ.

ಅಕ್ಕಮಹಾದೇವಿಯನ್ನು ಆಧರಿಸಿ ಬಂದಿರುವ ಎಲ್ಲಾ ಐತಿಹಾಸಿಕ ಕಾದಂಬರಿಗಳಲ್ಲಿ ಮೇಲಿನ ಎರಡು ಚಾರಿತ್ರಿಕ ಸಂಗತಿಗಳು ಒಂದಕ್ಕೊಂದು ಪೂರಕವಾಗಿ ಬಂದಿರುವುದನ್ನು ಗಮನಿಸಬಹುದು. ಮತ್ತು ಮೂರು ಷರತ್ತುಗಳನ್ನು ಮುರಿಯುವ ಮೂಲಕ ಅಕ್ಕಮಹಾದೇವಿಯ ಮೇಲಿನ ಅಧಿಕಾರವನ್ನು ಕೌಶಿಕ ಅಥವಾ ಕಸಪಯ್ಯರಾಯ ಕಳೆದುಕೊಂಡಿರುವುದನ್ನು ಚಿತ್ರಿಸಿದ್ದಾರೆ.

ಬಸವರಾಜ ಕಟ್ಟೀಮನಿಯವರ 'ಗಿರಿಯ ನವಿಲು' ಕಾದಂಬರಿಯಲ್ಲಿ ಗುರು ಚಂದಿಮದೇವನನ್ನು ಅರಮನೆಯಿಂದ ಕೌಶಿಕನು ಹೊರಗಟ್ಟುತ್ತಿದ್ದಾಗ ವಿಷಯ ತಿಳಿದು ಅಕ್ಕಮಹಾದೇವಿ ಮೈ ಮೇಲಿನ ವಸ್ತ್ರ ಕಳಚಿ ಬೀಳುತ್ತಿರುವ ಪರಿವೆಯಿಲ್ಲದೆ ಧಾವಂತದಲ್ಲಿ ಬಂದು ಚಂದಿಮದೇವನ ಚರಣಗಳಿಗೆರಗಿದ್ದಾಳೆ. ಈ ಸಂದರ್ಭದಲ್ಲಿ ಕೌಶಿಕನು ಆಡುವ ವ್ಯಂಗ್ಯದ ಮಾತುಗಳು ಅಕ್ಕಮಹಾದೇವಿಯ ಬಂಧನದ ಬಿಡುಗಡೆಗೆ ನಾಂದಿಯಾಗಿವೆ.

"ತೆಗೆ, ತೆಗೆ! ನಿನಗೇತಕ್ಕೆ ಸೀರೆ? ನಿನಗೇತಕ್ಕೆ ಲಜ್ಜೆ? ಅತ್ಯಂತ ಭಕ್ತೆ ನೀನು! ಮೀರಿದ ವಿರಕ್ತೆ ನೀನು! ನಿನ್ನಂಥವಳಿಗೆ ಸೀರೆಯಾದರೂ ಏಕೆ! ಇಂಥ ಮಹಾವಿರಾಗಿಣಿಯರಿಗೆ ವಸ್ತ್ರದ ಅವಶ್ಯಕತೆಯಾದರೂ ಏನು! ದಿಗಂಬರರಾಗಿ ತಪಸ್ಸು ಮಾಡುವ ಋಷಿಮುನಿಗಳನ್ನು ನಾವು ನೋಡಿಲ್ಲವೆ? ಸ್ತ್ರೀಯರು ಮಾತ್ರ ದಿಗಂಬರಿಯರಾದುದನ್ನು ಇದುವರೆಗೂ ಯಾರೂ ಕೇಳಿರಲಿಲ್ಲ. ಇತಿಹಾಸದಲ್ಲೆಲ್ಲಾ ಇವಳೇ ಏಕಮಾತ್ರ ದಿಗಂಬರಿಯೆಂದು ಹೆಸರು ಪಡೆಯಲಿರುವಳೊ ಏನೊ! ಎನ್ನುತ್ತಾನೆ. ಅಕ್ಕಮಹಾದೇವಿ ತನ್ನಲ್ಲಿ ಮೂಡಿದ್ದ ಎಲ್ಲಾ ಬಿರುಗಾಳಿಗಳೂ ಒಮ್ಮೆಗೆ ಶಾಂತವಾಗುವಂತೆ "ಹೌದು, ನಾನು ಭಕ್ತೆಯೇ, ಮೀರಿದ ವಿರಕ್ತೆಯೇ, ಮಹಾವಿರಾಗಿಣಿಯೆ, ನನಗೆ ಈ ವಸ್ತ್ರದ ಹಂಗಾದರೂ ಯಾಕೆ? ಇವನೆನ್ನುವಂತೆ ದಿಗಂಬರಿಯೇ ಆಗುವೆ"[1] ಎನ್ನುತ್ತಾ ಅಕ್ಕಮಹಾದೇವಿ ನಗ್ನಳಾಗಿ ಕೌಶಿಕನೊಂದಿಗಿನ ಎಲ್ಲ ಬಂಧನವನ್ನು ಕಳಚಿಕೊಂಡು ಇನ್ನು ನಾನುಂಟು–ನನ್ನ ನಲ್ಲನುಂಟು ಎನ್ನುತ್ತಾ ಮುಕ್ತಳಾಗಿ ಹೊರನಡೆದಿರುವುದನ್ನು ನೋಡಬಹುದಾಗಿದೆ. ಈ ಘಟನೆ ದೇಹದ ಮೇಲೆ ವಿವಾಹದ ಹೆಸರಿನಲ್ಲಿ ಹಕ್ಕುಸ್ಥಾಪಿಸಲು ಹೊರಟ ಕೌಶಿಕನ ಬಹುದೊಡ್ಡ ಸೋಲಾಗಿದೆ ಮಾತ್ರವಲ್ಲ, ಅಧಿಕಾರಶಾಹಿ ದಬ್ಬಾಳಿಕೆಯ ಪುರುಷ ಸಮಾಜಕ್ಕೆ ದೇಹದ ಮೂಲಕವೇ ಉತ್ತರಕೊಟ್ಟ ದಿಟ್ಟ ನಡೆಯಾಗಿ ಇದು ಕಾಣಿಸುತ್ತದೆ.

ಎಚ್.ತಿಪ್ಪೇರುದ್ರಸ್ವಾಮಿಯವರ 'ಕದಳಿಯ ಕರ್ಪೂರ' ಕಾದಂಬರಿಯಲ್ಲಿ ಅಕ್ಕಮಹಾದೇವಿಯ ಮೇಲೆ ಕೌಶಿಕ ರಾಜನಿಂದ ಅಧಿಕಾರ ಬಲದ ಒತ್ತಡವೇರ್ಪಟ್ಟಾಗ ಷರತ್ತುಗಳೊಂದಿಗೆ ಅರಮನೆಗೆ ಹೋಗಲು ನಿರ್ಧರಿಸಿರುವುದನ್ನು ನೋಡಬಹುದಾಗಿದೆ ವಿನಾಃ ಕೌಶಿಕನೊಂದಿಗೆ ವಿವಾಹವಾಗಿ ಹೋಗುವುದಿಲ್ಲ. ಅಲ್ಲದೆ ಷರತ್ತುಗಳಿಗೆ ಒಪ್ಪಿ ಅದರಂತೆ ನಡೆದರೆ ಮಾತ್ರ ಮುಂದೆ ವಿವಾಹವಾಗುವುದಾಗಿ ತಿಳಿಸಿರುವುದನ್ನು ಈ ಕಾದಂಬರಿ ಚಿತ್ರಿಸಿದೆ. ಕೌಶಿಕನ ಯೋಗ್ಯತೆಯನ್ನು ಅರಮನೆಯಲ್ಲಿದ್ದುಕೊಂಡೆ ಮೂರು ಬಾರಿ ಪರೀಕ್ಷಿಸಿದರೂ ತಪ್ಪುಗಳು ಸಂಭವಿಸಿದಾಗ ಅಕ್ಕಮಹಾದೇವಿ ಆತನಿಂದ ಸ್ವತಂತ್ರಳಾಗಿದ್ದಾಳೆ. "ನೋಡು ಈ ದೇಹಕ್ಕಾಗಿಯೇ ಅಲ್ಲವೇ ನೀನು ಹಾತೊರೆಯುತ್ತಿದ್ದದ್ದು. ನೋಡಿಕೋ ಏನಿದೆ ಈ ದೇಹದಲ್ಲಿ? ಈ ದೇಹದ ಯಾವ ಭಾಗ ನಿನ್ನನ್ನು ಮಾನವತೆಯಿಂದ ದೂರ ತಳ್ಳಿ ಪಶುವನ್ನಾಗಿಸುವಂತಹ ಸೌಂದರ್ಯದಿಂದ ಕೂಡಿದೆ ನೋಡಿಬಿಡು"[2] ಎಂದು ಆಕ್ರೋಶಭರಿತ ಮಾತುಗಳನ್ನು ಆಡುತ್ತಾ, ಜೊತೆಗೆ "ಮುಗಿಯಿತೆ? ನನ್ನ ಮಾತಿನಂತೆ ನಾನು ನಡೆದುಕೊಂಡಿದ್ದೇನೆ. ನಾನಿನ್ನು ಹೊರಡಲೇ? ಇನ್ನು ನಾನು ಸ್ವತಂತ್ರಳು ಯಾವ ಶಕ್ತಿಯೂ ನನ್ನನ್ನು ತಡೆಯಲಾರದು"[3]

ಎಂದು ಸೀರೆಯನ್ನು ಕಿತ್ತೆಸೆದು ದಿಗಂಬರವನ್ನೇ ದಿವ್ಯಾಂಬರವಾಗಿಸಿಕೊಂಡು ಬಂಧನಗಳಿಂದ ಮುಕ್ತಳಾಗಿ ಹೊರಡಿದ್ದಾಳೆ. ಸುಂದರವಾದುದು ವಸ್ತುವಾಗಲಿ, ವ್ಯಕ್ತಿಯಾಗಲಿ ರಾಜನಿಗೆ ಸೇರಬೇಕೆಂಬ ಅಧಿಕಾರಶಾಹಿಯ ಗರ್ವಕ್ಕೆ ಮಹಾದೇವಿ ಕೊಡುವ ದೊಡ್ಡ ಎಚ್ಚರಿಕೆಯಾಗಿ ಆತನ ಸೋಲಾಗಿ ಈ ಘಟನೆ ಕಾಣಿಸುತ್ತದೆ. ರಾಜನ ಸೌಂದರ್ಯ ಪ್ರಜ್ಞೆಯನ್ನು ದೇಹದ ಮೂಲಕವೇ ನಿರಸನಗೊಳಿಸಿ ಮುಕ್ತಳಾಗಿರುವ ಬಗೆ ಅತ್ಯಂತ ಪರಿಣಾಮಕಾರಿಯಾದುದಾಗಿದೆ.

ಜಗದ್ಗುರು ಮಾತೆ ಮಹಾದೇವಿಯವರ 'ತರಂಗಿಣಿ' ಕಾದಂಬರಿಯಲ್ಲಿ "ನೋಡಿಲ್ಲ ಶಿವೆ... ಪಾತರಗಿತ್ತಿಯು ಬಂಧನಬಿಡಿಸಿಕೊಂಡು ಹೊರಬರುತ್ತಿದೆ. ಎಷ್ಟು ಸುಂದರ ರೆಕ್ಕೆಗಳು ನೋಡಿಲ್ಲ. ಇದು ಒಳಗೇ ಸಿಕ್ಕಿ ಎಲ್ಲಿ ಸಾಯುವುದೋ ಎಂದು ಭಯವಾಗಿತ್ತು"[4] ಎಂದು ಅಕ್ಕಮಹಾದೇವಿ ಆನಂದ ಮತ್ತು ಆಶ್ಚರ್ಯದಿಂದ ಅರಮನೆಯ ಗೆಳತಿ ಶಿವಕಾಮಿನಿಗೆ ಹೇಳುವ ಮಾತುಗಳು ಮುಖ್ಯವಾಗಿವೆ. ಇಲ್ಲಿ ಪಾತರಗಿತ್ತಿ ಅಕ್ಕನ ಮನಸ್ಥಿತಿಗೆ ರೂಪಕದಂತಿದೆ. ಇದು ಅಕ್ಕನ ಬಂಧನದ ಲೌಕಿಕ ಸಂಸಾರ ಕೊನೆಗೊಂಡು ಮುಕ್ತಳಾಗಿ ಪಾತರಗಿತ್ತಿಯಂತೆ ಹಾರುವ ಮುನ್ಸೂಚನೆಯಾಗಿ ಕಾಣಿಸುತ್ತಿದೆ. ಹಾಗೂ ಇದಕ್ಕೆ ಪ್ರತಿಯಾಗಿ ಶಿವಕಾಮಿನಿ "ತಾಯಿ, ನಿಮಗೆ ಗೊತ್ತಿಲ್ಲವೇ ರೇಷ್ಮೆಯ ಹುಳುವಾದರೆ ಮಾತ್ರ ತಾನಿತ್ತ ಸುಂದರ ಗೂಡಿನ ಫಲವಾಗಿ ಮಾನವರ ಕೈಗೆ ಸಿಕ್ಕಿ ಸಾಯುವುದು. ಪಾತರಗಿತ್ತಿ ಹಾಗಲ್ಲ.. ಈ ಕೋಶಾವಸ್ಥೆ ಅದಕ್ಕೆ ಪುನರ್ಜನ್ಮ ನೀಡುವುದು. ಇದನ್ನು ಭೇದಿಸಿಕೊಂಡು ಹೊರಬಂದ ಮೇಲೆಯೇ ಪಾತರಗಿತ್ತಿಯ ಜೀವನದ ಆರಂಭ ಒಡತಿ. ಇನ್ನ ಮೇಲೆ ಹೂವುಗಳ ಮಕರಂದಪಾನಕ್ಕೆ ಹಾರುವುದು"[5] ಎನ್ನುತ್ತಾಳೆ. ಪಾತರಗಿತ್ತಿಯ ರೂಪಾಂತರ, ಸೃಷ್ಟಿಯಲ್ಲಿ ಸಹಜಕ್ರಿಯೆಯಾದರೂ ಅಕ್ಕಮಹಾದೇವಿಗೆ ಇದು ಹೊಸ ಸಂದೇಶವನ್ನು ನೀಡುತ್ತಿರುವಂತೆ ಕಾಣಿಸುತ್ತದೆ. ಕಂಬಳಿ ಹುಳುವಿನ ಕೋಶಾವಸ್ಥೆಯು ಚಿಟ್ಟೆಯಾಗಿ ಹೊಸ ಬದುಕನ್ನು ನೀಡುತ್ತದೆ. ರೇಷ್ಮೆ ಹುಳುವಿನ ಕೋಶಾವಸ್ಥೆ ಅದರ ಬದುಕಿನ ದುರಂತವನ್ನು ಸಂಕೇತಿಸುತ್ತದೆ. ಅಕ್ಕಮಹಾದೇವಿ ಕೌಶಿಕನ ಅರಮನೆಯ ಕೋಶಾವಸ್ಥೆಯಲ್ಲಿ ರೇಷ್ಮೆ ಹುಳುವಿನಂತೆ ದುರಂತ ಕಾಣದೆ, ಚಿಟ್ಟೆಯಾಗಿ ರೂಪಾಂತರಗೊಂಡು ಸ್ವಚ್ಛಂದವಾಗಿ ಹಾರಹೊರಡುವುದನ್ನು ಈ ಘಟನೆ ಸಂಕೇತಿಸುತ್ತದೆ.

ಅರಮನೆಗೆ ಬಂದ ಜಂಗಮರನ್ನು "ಭಿಕಾರಿಗಳೇ ನಡೆಯಿರಿನ್ನು" ಎನ್ನುತ್ತಾ ಆಜ್ಞಾಪಿಸಿ "ನಿನ್ನ ಬದುಕಿಗೆ ಪರಿಹಾರವೇ ಅದಿರುವುದು ನನ್ನ ಬಳಿ! ಸುಮ್ಮನೆ ಇತ್ತ ಕಡೆ ಬಾ"[6] ಎಂದು ಅಕ್ಕಮಹಾದೇವಿಯ ಸೀರೆಯನ್ನು ಹಿಡಿದು ಎಳೆದ ಕೌಶಿಕನ ವಿಕೃತ ಮನಸ್ಸಿಗೆ ಅಕ್ಕಮಹಾದೇವಿ ಕೊಡುವ ಪ್ರತ್ಯುತ್ತರ ಪರಿಣಾಮಕಾರಿಯಾದುದಾಗಿದೆ. "ಮೂರ್ಖ, ಅವಿವೇಕಿ.. ಅಹಂಕಾರಿ, ಬಹಿರಂಗದ ಸೀರೆಯನ್ನು ನೀನು ಮುಟ್ಟಬಹುದು, ಎಳೆಯಬಹುದು. ನನ್ನ ಶರೀರವನ್ನು ಮುಸುಕಿರುವ ನಿರ್ವಾಣವನ್ನು ನೀನು ಸೆಳೆದುಕೊಳ್ಳಬಲ್ಲೆಯಾ? ನನ್ನ ಇನಿಯ ಚನ್ನಮಲ್ಲಿಕಾರ್ಜುನನು ದಿಗಂಬರ... ನಾನವನ ಮೀಸಲು ಸತಿ. ಅವನ ಕಾರುಣ್ಯವನ್ನೇ ಸೀರೆಯಾಗಿ ಉಟ್ಟ ನನಗೆ ಈ ಯಾವ ಸೀರೆಯ ಹಂಗೂ ಇಲ್ಲ.."[7] ಎನ್ನುತ್ತಾ ಕೌಶಿಕನ ಮುಖಕ್ಕೆ ಸೀರೆಯನ್ನು ಕಿತ್ತೆಸೆದು ಸರ್ವಬಂಧನಗಳಿಂದಲೂ ಮುಕ್ತಳಾದಂತೆ ಹೊರನಡೆದಳು. ಈ ಸಂದರ್ಭವು ತನ್ನ ದೇಹವನ್ನು ಕೇವಲ ಭೋಗಕ್ಕಾಗಿ ಬಳಸುವ ಮತಿಹೀನ, ಮತಿಭ್ರಷ್ಟ ಕೌಶಿಕನ ಅಜ್ಞಾನಕ್ಕೆ ಮಹಾದೇವಿ ಕೊಡುವ ದಿಟ್ಟ ಉತ್ತರವಾಗಿದೆ ಮತ್ತು ಕೌಶಿಕನ ಮೋಹಪಂಜರದಿಂದ ಬಿಡುಗಡೆ ಹೊಂದಿ ಮುಕ್ತಳಾದುದನ್ನು ಕಾಣಬಹುದಾಗಿದೆ.

ಸು.ರುದ್ರಮೂರ್ತಿಶಾಸ್ತ್ರಿಯವರ 'ಅಕ್ಕಮಹಾದೇವಿ' ಕಾದಂಬರಿಯಲ್ಲಿ "ಯಾವ ಸೌಂದರ್ಯ! ಇದೆಲ್ಲ ಶವದ ಸಿಂಗಾರವಲ್ಲವೆ ಸರಸ್ವತಿ? ಒಂದಲ್ಲ ಒಂದು ದಿನ ಜೀವ ಕಳೆದುಕೊಂಡು ಹೆಣವಾಗುವ ಈ ದೇಹದ ಸೌಂದರ್ಯ ಶಾಶ್ವತವೆ? ಅಥವಾ ಹೆಚ್ಚು ಕಾಲ

ಬದುಕಿದ್ದರೆ ಮುದಿಯಾಗಿ, ದೇಹ ನಿತ್ರಾಣವಾಗೆ, ಕಣ್ಣು ಮಂಜಾಗಿ, ಹಲ್ಲು ಉದುರಿ ಹೋಗಿ ವಿಕಾರವಾಗುವ ಈ ದೇಹದ ನಶ್ವರ ಚೆಲುವಿನ ಭ್ರಮೆಯಲ್ಲಿ ಮುಳುಗುವುದು ಎಷ್ಟು ಹಾಸ್ಯಾಸ್ಪದ!"[8] ಎನ್ನುವ ಮಹಾದೇವಿ ಜೀವನದ ನಗ್ನ ಸತ್ಯಗಳನ್ನು ಅರ್ಥಮಾಡಿಕೊಂಡು ಮಾಯಾಮೋಹಗಳನ್ನು ಗೆದ್ದಿರುವ ಪರಿಯನ್ನು ಕಾಣಬಹುದಾಗಿದೆ. ಪ್ರಸ್ತುತ ಕಾದಂಬರಿಯಲ್ಲಿ ಅಕ್ಕಮಹಾದೇವಿ ಮತ್ತು ಕೌಶಿಕನ ವಿವಾಹ ಪ್ರಸಂಗದಲ್ಲಿ ಕೌಶಿಕನು ಅಧಿಕಾರ ಬಲದ ಮೂಲಕ ತಾನು ಮೆಚ್ಚಿದ ಹೆಣ್ಣನ್ನು ಪಡೆಯಲೊರಟಿರುವುದನ್ನು ಕಾಣಬಹುದು. ಆದರೆ ವಿವಾಹ ಎಂಬುದು ಎರಡು ಜೀವಗಳು ಪರಸ್ಪರ ಒಪ್ಪಿ ಏರ್ಪಡುವ ಸುಂದರ ಬಂಧವಾಗಿದೆ. ಇಲ್ಲಿ ಒಬ್ಬರ ಒಪ್ಪಿಗೆ ಇಲ್ಲವೆಂದಾದರೆ ಅಂತಹ ವಿವಾಹಗಳು ಅರ್ಥಹೀನವಾಗುತ್ತದೆ.

"ಅಮ್ಮ ಧೈರ್ಯವಾಗಿರಿ, ನನ್ನ ಇಷ್ಟವಿಲ್ಲದೆ ಕೌಶಿಕ ನನ್ನನ್ನು ತನ್ನ ಹೆಂಡತಿಯಾಗಿ ಮಾಡಿಕೊಳ್ಳಲಾರ. ನನ್ನ ತನುಮನವೆಲ್ಲ, ಜೀವ ಭಾವವೆಲ್ಲ ಚೆನ್ನಮಲ್ಲಿಕಾರ್ಜುನಮಯವಾಗಿರುವಾಗ, ಆ ಯಃಕಶ್ಚಿತ್ ಮನುಷ್ಯ ಏನು ತಾನೇ ಮಾಡಬಲ್ಲ? ತೋರಿಕೆಯ ಮದುವೆ ಆಗಿಹೋಗಲಿ"[9] ಎನ್ನುವ ಮಹಾದೇವಿಯ ಮಾತುಗಳಲ್ಲೇ ಲಜ್ಜೆಗೆಟ್ಟ ರಾಜನನ್ನು ಸೋಲಿಸಿ ಸ್ವತಂತ್ರಳಾಗಿ, ಮುಕ್ತಳಾಗಿ ಹೊರಬರುವ ಆತ್ಮವಿಶ್ವಾಸ ಕಾಣಿಸುತ್ತದೆ. ಮುಂದೆ ಷರತ್ತುಗಳನ್ನು ರಾಜ ಮುರಿದಾಗ ಅಕ್ಕಮಹಾದೇವಿ ಆತನನ್ನು ತ್ಯಜಿಸಿ ದಿಗಂಬರೆಯಾಗಿ ಬಂಧನಗಳಿಂದ ಮುಕ್ತಳಾಗಿ ಹೊರಬಂದಿದ್ದಾಳೆ. "ವಸ್ತ್ರ ತ್ಯಾಗ ನನ್ನದೇ ನಿರ್ಧಾರ, ನನ್ನ ವಸ್ತ್ರಗಳನ್ನು ತೆಗೆಯುವ ಧೈರ್ಯ ಲಂಪಟ ರಾಜನಿಗೆ ಹೇಗೆ ಬರಬೇಕು? ಇದು ನಾನೇ ನನ್ನ ಸ್ವ ಇಚ್ಛೆಯಿಂದ ಮಾಡಿದ ನಿರ್ಧಾರ"[10] ಎಂಬ ಮಹಾದೇವಿಯ ಮಾತುಗಳಲ್ಲಿ ಅವಳು ದೇಹದ ಬಾಹ್ಯಾಂಬರಗಳಿಗೆ ಮಹತ್ತ್ವ ನೀಡದೆ ಅಂತರಂಗಕ್ಕಷ್ಟೇ ಮಹತ್ತ್ವ ನೀಡಿ, ಅಂತರಂಗದ ಪ್ರೇಮದ ಕರೆಗೆ ಓಗೊಟ್ಟು, ದೇಹವನ್ನಷ್ಟೇ ಮೆಚ್ಚಿದ ಕಾಮಿಷ್ಟನಿಗೆ ದೇಹವನ್ನೇ ಉತ್ತರವಾಗಿಸಿ ಮುಕ್ತಳಾಗಿ ಹೊರಬಂದಿರುವುದನ್ನು ಸೂಚಿಸುತ್ತದೆ. ಎಲ್ಲ ಲೌಕಿಕ ಬಂಧನಗಳನ್ನು ಕಿತ್ತೆಸೆದು ದೈವಿಕ ಪತಿಯೆಡೆಗೆ ಆತ್ಮಸಂಕಲ್ಪದೊಂದಿಗೆ, ನಿರ್ಭೀತಿಯಿಂದ ಸ್ವತಂತ್ರಳಾಗಿ ಹೋಗುವುದನ್ನು ಪ್ರಸ್ತುತ ಕಾದಂಬರಿ ಮನೋಜ್ಞವಾಗಿ ಚಿತ್ರಿಸುತ್ತದೆ.

ಡಾ.ಲಕ್ಷ್ಮಣ ಕೌಂಟೆಯ 'ಮಹಾಸಂಗಮ' ಕಾದಂಬರಿಯಲ್ಲಿ ಮಹಾದೇವಿ ಮೈ ಮೇಲಿನ ಸೀರೆಯನ್ನು ಬಿಚ್ಚಿ ಕೌಶಿಕನ ಮೇಲೆ ಎಸೆದು "ಇನ್ನಾದರೂ ನನ್ನ ದಿಗಂಬರತ್ವದ ದರ್ಶನ ಮಾಡಿ ನಿನ್ನಲ್ಲಿ ಮನೆಮಾಡಿರುವ ಮೋಹವನ್ನು ಕಳೆದು ಕೋ ಉಚ್ಚೆಯ ಬಚ್ಚಲಿನ ರುಚಿಯ ಸವಿಗೆ ಬಿದ್ದ ಹೊಲಸು ಕಾಮುಕ ಕ್ರಿಮಿ ನೀನು. ನೋಡಿಕೋ; ಏನಿದೆ ಇದರಲ್ಲಿ?[11] ಎನ್ನುವ ಮೂಲಕ ಕೌಶಿಕನ ತಲೆಗೆ ಏರಿದ್ದ ಕಾಮದ ನಶೆಯನ್ನು ಇಳಿಸಿ, ಅವಳಿಗೆ ಮೋಹದ ಜಾಲ ಎನಿಸಿದ್ದ ಸಂಸಾರವನ್ನು ಕಿತ್ತೆಸೆದು ಶಾಶ್ವತ ಮುಕ್ತಿ ಹೊಂದುವುದಕ್ಕೆ ಹೊರಬಂದಿರುವುದನ್ನು ಕಾಣಬಹುದು. "ನೋಡೋ! ಚೆನ್ನಾಗಿ ನೋಡೋ! ನನ್ನ ವ್ರತ ಕೆಡಿಸಿದ ಪಾಪಿ ನನ್ ಮಗನೇ... ನಿನ್ನ ಕಳ್ಳು ತುಂಬಿದ ಕಂಗಳಿಗೆ ತೃಪ್ತಿ ಆಗುವ ತನಕ ನೋಡೋ... ನೋಡೋಽಽ"[12] ಎಂದು ಕೌಶಿಕನಿಗೆ ಚಂಡಕಾಳಿಯಾಗಿ ಅಬ್ಬರಿಸುವ ಮಹಾದೇವಿಯನ್ನು ವಿ.ಮಾ. ಜಗದೀಶ್ ಅವರ 'ರೂಹಿಲ್ಲದ ಚೆಲುವ' ಕಾದಂಬರಿಯಲ್ಲಿ ಕಾಣಬಹುದಾಗಿದೆ. ರಾಜದಂಡವನ್ನು ಪ್ರಯೋಗಿಸಿ ಮಲ್ಲಿಕಾರ್ಜುನನಿಗೆ ಮೀಸಲಾದ ಹೆಣ್ಣನ್ನು ಕೌಶಿಕನು ವಿವಾಹವಾಗುತ್ತಾನಾದರೂ ಅವಳನ್ನು ಸತಿಯಾಗಿ ಉಳಿಸಿಕೊಳ್ಳುವಲ್ಲಿ ಸೋತಿರುವುದನ್ನು ಕಾಣಬಹುದಾಗಿದೆ. ದಿಗಂಬರೆಯಾಗಿ ಹೊರಡುವ ಅಕ್ಕಮಹಾದೇವಿ ಕೌಶಿಕನ ರೂಪದಲ್ಲಿ ಬಂದೊದಗಿದ್ದ ಎಲ್ಲಾ ಕಗ್ಗಂಟುಗಳನ್ನು ದಾಟಿ ನಿರುಮ್ಮಳಾಗಿ ತನ್ನಿಚ್ಛೆಯ ಬದುಕಿನತ್ತ ಮುಖ ಮಾಡಿರುವುದನ್ನು ಈ ಕಾದಂಬರಿಯಲ್ಲಿ ಗಮನಿಸಬಹುದಾಗಿದೆ.

ಎಚ್.ಎಸ್.ಅನುಪಮಾ ಅವರ 'ಬೆಳಗಿನೊಳಗು ಮಹಾದೇವಿಯಕ್ಕ' ಕಾದಂಬರಿಯಲ್ಲಿ ವಿಶ್ವಚೇತನವನ್ನು ಕಾಣುವ ಮತ್ತು ಸೇರುವ ಪಥದಲ್ಲಿ ಮಹಾದೇವಿ ತನ್ನ ಜೀವಕ್ಕೆ ಅಂಟಿಕೊಂಡಿದ್ದ ಎಲ್ಲಾ ಬಂಧನಗಳಿಂದ ಎಳೆ ಎಳೆಯಾಗಿ ಬಿಡಿಸಿಕೊಂಡು ಮುಕ್ತತೆಗೆ ಮಾದರಿಯಾಗಿ ನಿಂತಿರುವುದನ್ನು ಕಾಣಬಹುದಾಗಿದೆ. ಉಡುತಡಿಯ ಪರಿಸರ ಮತ್ತು ಗುರುಲಿಂಗದೇವರು ನೀಡಿದ ಅಕ್ಷರಜ್ಞಾನ ಮಹಾದೇವಿಯ ಮಾನಸಿಕ ಬಂಧನದ ಬಗೆಗೆ ಆರಂಭಿಕ ತಿಳುವಳಿಕೆಗಳನ್ನು ನೀಡಿದೆ. ತಂದೆ ನಿರ್ಮಲಶೆಟ್ಟರ ಮನೆಗೆ ಆಗಾಗ ಹಿಮಾಲಯದಿಂದ ಬಂದು ಹೋಗುತ್ತಿದ್ದ ದಿಗಂಬರ ಜೈನ ಸಾಧು ರುದ್ರಜಯರು ಹೇಳುವ ರಂಧ್ರದಷ್ಟಾದರೂ ತನ್ನ ಅಹಮನ್ನು ಕಳೆದುಕೊಂಡು ಒಳಗೊಂದು ಶೂನ್ಯ ಹುಟ್ಟಿಸಿಕೊಂಡ 'ಅಹಂನಿರಸನದ ಸಂಕೇತವಾದ ರುದ್ರಾಕ್ಷಿ'ಯ ಬಗೆಗಿನ ಮಾತುಗಳು ಮಹಾದೇವಿಯ ಆಲೋಚನೆಗಳನ್ನು ಪ್ರಭಾವಿಸಿವೆ.

ರುದ್ರಜಯರ ನಗ್ನತೆಯ ಬಗ್ಗೆ ಮಹಾದೇವಿ ಕುತೂಹಲದಿಂದ ಕೇಳುವ ಪ್ರಶ್ನೆಗಳಿಗೆ ಅವರು ನೀಡುವ ತಾತ್ತ್ವಿಕ ಉತ್ತರಗಳು ಅತ್ಯಂತ ಮಹತ್ತ್ವವಾದುದಾಗಿದೆ. "ಇಡಿಯ ಲೋಕವನ್ನು ಅದು ಇರುವ ಹಾಗೇ ಅರಿಯಲು ನಮ್ಮನ್ನು ನಾವರಿಯಬೇಕು. ಅದು ಸ್ವಸ್ವರೂಪ ಅರಿವು. ಅದನ್ನು ದಿನನಿತ್ಯ ಸಾಧಿಸಿಕೊಳ್ಳಬೇಕು. ಅದಕ್ಕೆ ನಗ್ನತೆಗಿಂತ ಉತ್ತಮ ಮಾರ್ಗವಿಲ್ಲ. ಜೊತೆಗೆ ಲೋಕವನ್ನೂ ನಗ್ನವಾಗಿಯೇ ಅರಿಯಬೇಕು. ನಿನ್ನ ನಾನೀಗ ನೋಡುತ್ತಿದ್ದರೂ ನಿನ್ನ ಬಟ್ಟೆಯನ್ನಾಗಲೀ, ಕಣ್ಣನ್ನಾಗಲೀ ಆಡುವ ಬಾಯಿಯನ್ನಾಗಲೀ, ಹಾರುವ ಕೂದಲನ್ನಾಗಲೀ, ಚರ್ಮದ ಬಣ್ಣವನ್ನಾಗಲೀ ನೋಡುತ್ತಿಲ್ಲ ಮಗೂ, ನಿನ್ನ ಒಳಗನ್ನು ಎಂದರೆ ನಿನ್ನೊಳಗೆ ನದಿಯಂತೆ ಶುಭ್ರವಾಗಿ ಪ್ರವಹಿಸುತ್ತಿರುವ ಆ ಅಂತಸ್ಸತ್ವ ಏನಿದೆಯೋ ಅದನ್ನು ಮಾತ್ರ ನೋಡುತ್ತಿರುವೆ. ತಾತ್ತ್ವಿಕವಾಗಿ ನಗ್ನತೆಯೆಂದರೆ ಮುಕ್ತತೆ. ಹೊದಿಸಿರುವ ಪ್ರಭಾವಳಿಯನ್ನೆಲ್ಲ ಚೌಕಟ್ಟಾಗಿ ನಿನ್ನನ್ನು ಬಂಧಿಸಿರುವುದನ್ನೆಲ್ಲ ಕಿತ್ತು ಮುಕ್ತವಾಗಿ, ಸಹಜವಾಗಿ ಬದುಕುವುದು ನಗ್ನತೆ. ನಗ್ನತೆಯ ಇನ್ನೊಂದು ಮುಖ ನನ್ನೊಳಗನ್ನು ನಾನು ನೋಡಿಕೊಳ್ಳುವುದು ನಮ್ಮ ರೂಪ, ಸಂಭ್ರಮ, ಸುಖ, ದುಃಖ, ನೋವು ಇವೆಲ್ಲವೂ ನಿಜ. ಅವೆಲ್ಲದರಿಂದಾಚೆ ನಿರ್ಮಲವಾದ, ಸಹಜವಾದ, ಅಜೇಯವಾದ ಆತ್ಮವಿದೆ. ಪ್ರತಿ ಜೀವದ ಸಹಜ ರೂಪವೂ ದೀಪದಂತೆ ಬೆಳಗುತ್ತಿರುತ್ತದೆ. ನನ್ನೊಳಗೆ ಇನ್ನೊಬ್ಬ ರುದ್ರಜಯನಿದ್ದಾನೆ. ಅವನು ಸಂಪೂರ್ಣ ನಗ್ನ ನಾನು ನಿಜಸ್ವರೂಪ ಮರೆತು ಮುಖವಾಡ ಧರಿಸಿದಾಗಲೆಲ್ಲ ಗಹಿಗಹಿಸಿ ನಗುತ್ತಾನೆ. ನಾವು ಬಹಳ ಸಾರಿ ಒಳಗಿನವನನ್ನು ಹತ್ತಿಕ್ಕಲು ನೋಡುತ್ತೇವೆ. ಆದರೆ ಅವನಿಷ್ಠುರಿ, ಸತ್ಯವಂತ, ನಿರಂತರ ಹುಸಿಗಳನ್ನೆತ್ತಿ ತೋರಿಸುತ್ತಲೇ ಇರುತ್ತಾನೆ. ಒಳಗಿನ ಧ್ವನಿ ನಿಲ್ಲಬಾರದು. ಒಳಗಿನ ನಾನು ಸಾಯದಂತೆ ಕಾಪಾಡಬೇಕು. ಅದಕ್ಕಾಗಿಯೇ ನಗ್ನತೆ ಮುಖ್ಯ."[13] ಈ ಮಾತು ಮಹಾದೇವಿಯ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿರುವುದು ಮಾತ್ರವಲ್ಲ. ಆಕೆಯ ಬದುಕಿನ ಮಹಾತಿರುವಿಗೂ ಮುಕ್ತತೆಯ ಹಾದಿಗೂ ಬಹುದೊಡ್ಡ ಅಡಿಗಲ್ಲಾಗಿರುವುದನ್ನು ಗಮನಿಸಬಹುದಾಗಿದೆ. ಮಹಾದೇವಿಯ ವೈವಾಹಿಕ ಬದುಕಿನ ಏರಿಳಿತಗಳು ಅತ್ತೆ ಹಾಗೂ ಪತಿಯ ಉಸಿರುಗಟ್ಟಿಸುವ ವಾತಾವರಣ, ಮತ್ತೆ ಈ ಬಂಧದಲ್ಲಿ ಮುಂದುವರಿಯಲು ಮಹಾದೇವಿಗೆ ಸಾಧ್ಯವಾಗುವುದಿಲ್ಲ. ಅಲ್ಲದೆ ಹಸಿವು, ಬೇಸರ, ದುಃಖ, ಅಸಹಾಯಕತೆಗಳಿಂದ ಕುಸಿದು ಬಿದ್ದ ಅಕ್ಕನಿಗೆ ಸುಪ್ತವಾಗಿ ಕೇಳಿಸುವ "ನಂಟು ಎಂದರೆ ಸುಮ್ಮನಲ್ಲ, ಅದು ಅಂಟಿಸುವುದೂ ಹೌದು, ಜಾರಿಸಿ ಬೀಳಿಸುವುದೂ ಹೌದು. ನಂಟಿನ ಅಂಟಿಗೆ ಬಂಧಿಯಾಗಿ ಬಿದ್ದಲ್ಲೇ ಇರಬೇಡ ಮಗೂ. ಬಿದ್ದಲ್ಲೇ ಮತ್ತೆ ಬೀಳಬೇಡ. ಏಳು ಮೇಲೇಳು"[14] ಈ ಮಾತುಗಳು ಅಕ್ಕನ ಬದುಕಿನ ಮುಂದಿನ ತಿರುವಿಗೆ ಆಕೆಯನ್ನು ಈಗಾಗಲೇ ಮಾನಸಿಕವಾಗಿ ಸಿದ್ಧಗೊಳಿಸುತ್ತಿರುವಂತೆ ಕಾಣುತ್ತದೆ ಮತ್ತು

ಅಕ್ಕಮಹಾದೇವಿ "ಎಲ್ಲ ಬಿಟ್ಟು ಹೊರಡಬೇಕು, ಬಿಟ್ಟನೆಂದರೆ ಎಲ್ಲವನ್ನು ಬಿಟ್ಟುಬಿಡಬೇಕು. ಕಟ್ಟೆಯಲ್ಲಿ ಊರಿನಲ್ಲಿ ಎಂದೂ ಎಲ್ಲಿಯೂ ನೆಲೆ ನಿಲ್ಲಬಾರದು, ಗುಂಪು ಕಟ್ಟಬಾರದು, ಭಕ್ತ ಸಾಧ್ವಿ ಎಂಬ ವೇಷ ತೊಡಬಾರದು. ಆಸೆಗಳ ಕಳಚಬೇಕು. ಆಮಿಷಗಳ ಕಳಚಬೇಕು ಭಯ, ಕೋಪ, ನಿರಾಸೆ, ನಿರೀಕ್ಷೆಗಳೆಂಬ ದಿರಿಸುಗಳ ಕಳಚಬೇಕು, ಬಿಚ್ಚಿ ಬಿಸುಡಬೇಕು ಅಂದು ಆ ಬೆಳಕು ಹೇಳಿದಂತೆ ಒಳಗು ಹೊರಗಾಗಬೇಕು"[15] ಎಂದು ದೃಢ ನಿಶ್ಚಯಿಸಿ ನಿಜಪಥದೆಡೆಗೆ ಹೊರಡಲು ಮನಸ್ಸನ್ನು ಹುರಿಗೊಳಿಸಿರುವುದನ್ನು ಕಾಣಬಹುದಾಗಿದೆ.

ಕಸಪಯ್ಯರಾಯ ಆಕೆಯ ಮೇಲೆ ನಿರಂತರವಾಗಿ ನಡೆಸುತ್ತಾ ಬಂದಿದ್ದ ದೈಹಿಕ ಮತ್ತು ಮಾನಸಿಕ ಹಲ್ಲೆಗಳು ದಿನದಿನವೂ ಆಕೆಯಿಂದ ಕಸಪಯ್ಯರಾಯನನ್ನು ಅಗಲಿಸುತ್ತಲೇ ಬಂದಿವೆ. 'ತನ್ನಿಚ್ಚೆಯನ್ನು ಮೀರಿ ಸ್ವ ಇಚ್ಛೆಯಿಂದ ಬದುಕುವ ಹೆಣ್ಣನ್ನು ಪುರುಷಲೋಕ ಎಂದಿಗೂ ಸಹಿಸುವುದಿಲ್ಲ' ಇಲ್ಲಿಯೂ ಕಸಪಯ್ಯ ತನ್ನಿಚ್ಚೆಯನ್ನು ಮೀರಿದ ಪತ್ನಿಯನ್ನು ಸಹಿಸುವುದಿಲ್ಲ. "ಥೂ ಹಾದರಗಿತ್ತಿ, ಗುರು ಅಂತೆ ಗುರು, ಯಾವ ಮಿಂಡನ್ನು ಹುಡಿಕ್ಕಂಡು ಬಂದಿದ್ಯೇ' ಹಣ್ಣು, ಹಂಪ್ಲ, ಶೀಕರಣೆ ಎಲ್ಲ ಅವುನ್ಗಾಗೇ ಮಾಡಿದ್ದ ಇವತ್ತು? ನೀ ಇಲ್ಲಿಗೆ ತಂದಿದ್ಯಾವ್ದೂ ನಿಂದಲ್ಲ ತಿಳ್ಕ, ಎಲ್ಲಾ ನಂದೇ, ನೀ ಹಾಕ್ಕಂಡಿದೀಯಲ್ಲ, ಅವಷ್ಟೂ ನಂದೇ, ನೀನು ಉಟ್ಟ ಸೀರೆ ನಂದು, ನೀ ತೊಟ್ಟ ಬಂಗಾರ ನಂದು, ನೀನು ನಿಂತ ನೆಲ ನಂದು, ನೀ ತಂದ ಕಂಚಿನ ಗಿಂಡಿ ಇಲ್ಲೀಗ ಉರುಳಿ ಬಿತ್ತಲ್ಲ, ಅದೂ ನಂದು ಕುಕ್ಕೆ ನಂದು, ಎಲ್ಲಾನೂ ನಂದೇ ತಿಳಕ, ಅಂತಾದ್ರಲ್ಲಿ ಬ್ಯಾಡಂದ್ರೂ ಕೇಳಲಾರದಂಗೆ ಈ ಕಳ್ಳಜಂಗಮನ್ನ ಹುಡಿಕ್ಯಂಡು ಬಂದೇನೇ?"[16] ಎಂದು ಮಾತಿನ ಮತ್ತು ವಾಸ್ತವ ಸ್ಥಿತಿಯ ಹಿಡಿತವಿಲ್ಲದೆ ಕಸಪಯ್ಯರಾಯನು ವಿಕೃತ ಮನಸ್ಸಿನಿಂದ ಆಡುವ ಪ್ರತಿ ಮಾತುಗಳು ಮುಂದಿನ ದೊಡ್ಡ ಪರಿಣಾಮಗಳಿಗೆ ಬೀಜವಾದುದನ್ನು ನೋಡಬಹುದು. ಇಲ್ಲಿ ಕಸಪಯ್ಯ ಆಡುವ ಪ್ರತಿ ಮಾತುಗಳು ಕೇವಲ ಆತನದಾಗಿರದೆ ಇಡೀ ಪುರುಷ ಸಮಾಜದ ಮನೋಧರ್ಮವನ್ನು ತೆರೆದಿಡುತ್ತದೆ. ಹೆಣ್ಣನ್ನು ಅಥವಾ ಪತ್ನಿಯನ್ನು 'ತನ್ನಿಚ್ಚೆ'ಯ ಬಂಧನದಲ್ಲಿರಿಸಿ ಅದಕ್ಕೆ ಪೂರಕವಾಗಿಯೇ ಸಿದ್ಧಗೊಳಿಸಿ ಅದನ್ನು ಮೀರದಂತೆಯೇ ಹೆಣ್ಣಿನ ಸುತ್ತ ಬಲೆ ಹೆಣೆಯುತ್ತಲೇ ಬಂದಿರುವ ಪುರುಷನ ಅಹಂಕಾರದ ಮಾತುಗಳು ಇಲ್ಲಿ ಬಿಂಬಿತವಾಗುತ್ತಿದೆ. ಪತ್ನಿಯ ಇಚ್ಛೆ ಇಲ್ಲಿ ನಗಣ್ಯವಾಗಿದ್ದು, ಆಕೆಯ ಸ್ವಾತಂತ್ರ್ಯವೂ ಇಲ್ಲಿ ಗಂಡನ ಭಿಕ್ಷೆಯಾಗಿದೆ. ಸ್ವತಂತ್ರ ಅಸ್ತಿತ್ವವೇ ಇಲ್ಲದೆ ಪತಿ ನಿರ್ಮಿಸಿದ ಲೋಕದಲ್ಲೇ ಬಲವಂತದಿಂದ ಬದುಕು ಸವೆಸುತ್ತಾ ಬಂದಿರುವ ಎಷ್ಟೋ ಹೆಣ್ಣುಗಳು ಚರಿತ್ರೆಯಲ್ಲಿ ಮರೆಯಾಗಿ ಹೋಗಿದ್ದಾರೆ. ಕಸಪಯ್ಯರಾಯನಂತಹ ಎಷ್ಟೋ ಗಂಡುಗಳು ಮರುಹುಟ್ಟು ಪಡೆಯುತ್ತಲೇ ಬಂದಿದ್ದಾರೆ. ಆದರೆ ಇಂತಹ ಅಸಂಬದ್ಧ ಬೈಗುಳಗಳ ಕಸಪಯ್ಯನ ಕೆಟ್ಟ ವರ್ತನೆಗಳಿಗೆ ಅಕ್ಕಮಹಾದೇವಿ ನೀಡುವ ದಿಟ್ಟ ಉತ್ತರ ಗಮನಾರ್ಹವಾದುದಾಗಿದೆ ಮತ್ತು ಆ ಮೂಲಕ ಪುರುಷಾಹಂಕಾರಕ್ಕೆ ಕೊಡುವ ಕೊಡಲಿ ಪೆಟ್ಟಾಗಿದೆ. "ಮಾನಮರ್ಯಾದೆಗಳನ್ನೆಲ್ಲ ನಿರಿಗೆಯಾಗಿಸಿ ಮಡಚಿ ಸುರುಳಿಯೊಳಗೆ ಕಾಪಿಡುವೆನೆಂಬಂತೆ ಸೊಕ್ಕಿನಿಂದ ಗಂಡಾಗಿ ಕುಳಿತ್ತಿದ್ದ ಹದಿನಾರು ಮೊಳದ ಸೀರೆಯ ಕಿರುಗಣಿ ಗಂಟು ಉಳುಚಿದಳು. ಒಂದರ ಮೇಲೊಂದು ಒತ್ತೊತ್ತಿ ಕುಳಿತ ಮಡಿಕೆಗಳೆಲ್ಲ ಚದುರಿ ಅರಳಿದವು. 'ನೆಪ್ಪಿಡು, ಕಿರುಗಣಿ ಗಂಟು ಬಲವಾಗಿ ಹಾಕಬೇಕು ಮಗಾ ಹೆಂಗಸ್ರ ಮರ್ಯಾದೆ ಪೂರಾ ಆ ಗಂಟನ್ಯಾಗಿರತದೆ ನೋಡ್'... ಸೀರೆ ಉಡುವುದು ಕಲಿಸುತ್ತ ಅವ್ವಯ್ಯ ಕೊಟ್ಟ ಮೊದಲ ಎಚ್ಚರಿಕೆ ನೆನಪಾಯಿತು. ತಪ್ಪು ಅವ್ವಯ್ಯ ಹೆಂಗಸರ ಮರ್ಯಾದೆ ಕಿರುಗಣಿ ಗಂಟಿನಲ್ಲಿಲ್ಲ, ಮರ್ಯಾದೆ ಕಿರುಗಣಿಗಂಟಿನಲ್ಲಿದೆ ಎಂಬ ನಮ್ಮ ನಂಬಿಕೆಯಲ್ಲೇ ಹೂತು ಹೋಗಿದೆ. ಅದು ಎಲ್ಲೂ ಇಲ್ಲ, ಮರ್ಯಾದೆ ಎಂಬುದೇ ಇಲ್ಲ ಮತ್ತೇಕೆ ಈ ಬಟ್ಟೆ"[17] ಎಂದು ದಿಗಂಬರೆಯಾಗುತ್ತಾಳೆ.

ಈ ಘಟನೆಯ ಚಿತ್ರಣವನ್ನು ಗಮನಿಸಿದಾಗ ಮಹಾದೇವಿಯ ಬೌದ್ಧಿಕ ಮನಸ್ಥಿತಿಯನ್ನು ತಿರಸ್ಕರಿಸುತ್ತಾ ಕೇವಲ ದೈಹಿಕ ಸೊಬಗನ್ನಷ್ಟೇ ಪ್ರೀತಿಸುತ್ತಾ, ಕಾಮಿಸುತ್ತಾ ಅದರ ಮೇಲೆ ಹಕ್ಕು ಸ್ಥಾಪಿಸಲು ಹೊರಟ ಕೌಶಿಕನ ಕೆಟ್ಟ ಮನಸ್ಥಿತಿಗೆ ಅಕ್ಕನ ದಿಗಂಬರತ್ವದೇ ದಿಟ್ಟ ಉತ್ತರವಾಗಿ ಗೋಚರಿಸುತ್ತದೆ. ಇಲ್ಲಿ ಸೊಕ್ಕಿನಿಂದ ಗಂಡಾಗಿ ಕುಳಿತ್ತಿದ್ದ ಹದಿನಾರು ಮೊಳದ ಸೀರೆ ಎಂಬ ಪದವು ಸೀರೆಯು ಗಂಡು ರೂಪವನ್ನು ತಾಳಿ ಪುರುಷನ ಸ್ವೇಚ್ಛಾಚಾರದ ಮೇಲ್ಪದರವಾಗಿ ಹೆಣ್ಣನ್ನು ಸುತ್ತಿ ಬಂಧನದಲ್ಲಿರಿಸಿರುವುದನ್ನು ಬಿಂಬಿಸುತ್ತದೆ. 'ಗಂಡು ಸೀರೆ'ಯನ್ನು ಅಕ್ಕಮಹಾದೇವಿ ಕಿತ್ತೆಸೆದದ್ದು ತನ್ನ ಮೇಲೆ ಎಲ್ಲಾ ರೀತಿಯಿಂದಲೂ ಬಂಧನವಾಗಿ ಆವರಿಸಿಕೊಂಡಿದ್ದ ಪುರುಷ ದಬ್ಬಾಳಿಕೆಯನ್ನು ಸಂಪೂರ್ಣ ನಿರಾಕರಿಸಿ ಬೌದ್ಧಿಕವಾಗಿ, ಮಾನಸಿಕವಾಗಿ, ದೈಹಿಕವಾಗಿ ಸಂಪೂರ್ಣ ಮುಕ್ತಳಾದುದ್ದನ್ನು ಪ್ರತಿಬಿಂಬಿಸುತ್ತದೆ. ಮರ್ಯಾದೆ ಎಂಬುದು ಕೇವಲ ತೊಟ್ಟ ಬಟ್ಟೆಯಿಂದ ಮಾತ್ರ ನಿರ್ಧರಿತವಾಗದೆ ದೇಹವನ್ನು ಮೀರಿದ ವ್ಯಕ್ತಿತ್ವದ ಅಸ್ತಿತ್ವವೊಂದು ಹೆಣ್ಣಿಗಿದೆ ಎಂದು ಮಹಾದೇವಿ ಸಾಬೀತುಪಡಿಸಿದ್ದಾಳೆ. 'ನಿಂತಲ್ಲೇ ನಿಂತರೆ ಹೊಸ ಹಾದಿ ತೆರೆಯದು' ಎನ್ನುವಂತೆ ಅಕ್ಕಮಹಾದೇವಿಯು ತನ್ನ ಮೇಲೆ ಇಲ್ಲಿಯವರೆಗೆ ಆವರಿಸಿಕೊಂಡಿದ್ದ ಮೋಹ, ಕಾಮ, ದಬ್ಬಾಳಿಕೆ, ಒತ್ತಡ ಎಲ್ಲಾ ಬಂಧವನ್ನು ಸೀರೆಯಂತೆಯೇ ಕಿತ್ತೆಸೆದು ಸಂಪೂರ್ಣ ನಿರ್ಲಿಪ್ತಭಾವದೊಂದಿಗೆ ಬದುಕಿನ ಹೊಸ ಪಥದಲ್ಲಿ ಹೊರಳುವುದು ವಿಶೇಷವಾದುದಾಗಿದೆ. ಈ ಪಥದಲ್ಲಿ ಚಲನೆಯೇ ಶಿವನ ಅನುಭವವಾಗಿ ಲಿಂಗವೇ ಮಾರ್ಗದರ್ಶಿಯಾಗಿ ನಿಲ್ಲುತ್ತದೆ. ನಾನು, ನನ್ನದು ಎಲ್ಲವೂ ನನಗೆ ಸೇರಬೇಕು ಎಂದು ಲೋಕವೇ ಧಾವಂತಗೊಂಡಿರುವಾಗ ಯಾವುದು ನನ್ನದಲ್ಲ, ಯಾವುದೂ ನನಗೆ ಬೇಕಾಗಿಲ್ಲ ಎಂದು ಅಕ್ಕ ಎಲ್ಲ ಬಂಧನದಿಂದ ಮುಕ್ತಳಾಗಿ ಸಾಗುವುದು ಅಕ್ಕಮಹಾದೇವಿಯನ್ನು ಚರಿತ್ರೆಯಲ್ಲಿ ವಿಭಿನ್ನವಾಗಿಸಿದೆ.

ಅಕ್ಕಮಹಾದೇವಿಯ ಮುಕ್ತತೆಯೆಂದರೆ, ಭವಬಂಧಗಳಿಲ್ಲದ ನಗ್ನತೆಯಾಗಿದೆ. ಅದು ಸಹಜತೆಯೇ ಆಗಿದೆ. ಇದ್ದುದ್ದನ್ನು ಇರುವಂತೆಯೇ ಸಹಜವಾಗಿ ಸ್ವೀಕರಿಸುವ ಬದುಕನ್ನು ಅಕ್ಕಮಹಾದೇವಿ ರೂಢಿಸಿಕೊಂಡು ಮಾದರಿಯಾಗಿದ್ದಾಳೆ. ತನ್ನ ಪಥದಲ್ಲಿ ಬೇಡಿ ಉಣ್ಣುತ್ತಾ, ವಸ್ತ್ರವನ್ನು ತ್ಯಜಿಸಿ, ನಿರಾಕರಣೆಯ ಭಸ್ಮವನ್ನು ಲೇಪಿಸಿಕೊಂಡು ದೇಹವನ್ನೇ ದೇಗುಲವಾಗಿಸಿಕೊಂಡು ಮುಂದುವರೆದಿರುವುದನ್ನು ನೋಡಬಹುದು. ಸಂಸಾರತ್ಯಾಗ, ವಸ್ತ್ರತ್ಯಾಗ, ಆಹಾರತ್ಯಾಗ, ಲಿಂಗಸಾಧನೆ, ತಾರತಮ್ಯವಿಲ್ಲದೆ ಲೋಕಸಮಸ್ತವನ್ನು ನೋಡುವ ದೃಷ್ಟಿಕೋನದೊಂದಿಗೆ ಸ್ವಸ್ವರೂಪವನ್ನು ಅರಿಯುತ್ತಾ ಮುನ್ನಡೆದ ಅಕ್ಕಮಹಾದೇವಿಯ ಬದುಕು ಮುಕ್ತತೆಯ ಮಾದರಿಯನ್ನಾಗಿಸಿದೆ.

ಒಟ್ಟಾರೆಯಾಗಿ ಈ ಮೇಲಿನ ಎಲ್ಲಾ ಐತಿಹಾಸಿಕ ಕಾದಂಬರಿಗಳ ಹಿನ್ನೆಲೆಯಲ್ಲಿ ಅಕ್ಕಮಹಾದೇವಿ ಮುಕ್ತತೆಯ ಮಾದರಿಯಾಗಿ ರೂಪುಗೊಂಡಿರುವುದನ್ನು ಕಾಣಬಹುದಾಗಿದೆ. ಇಲ್ಲಿ ಅಕ್ಕಮಹಾದೇವಿಯ ನಗ್ನತೆ ಅಥವಾ ದಿಗಂಬರತ್ವವನ್ನು ಕೇವಲ ಬಾಹ್ಯ ಬೆತ್ತಲೆಯಾಗುವಿಕೆಗೆ ಸೀಮಿತಗೊಳಿಸದೆ ತಾತ್ತ್ವಿಕ ತಳಹದಿಯೊಂದಿಗೆ ಮುಕ್ತತೆಯ ಮಾದರಿಯಾಗಿ ಗುರುತಿಸಲಾಗಿದೆ. ವಿಶ್ವದ ಚೇತನವನ್ನು ಸೇರಲು ಹೊರಟ ಪಥದಲ್ಲಿ ತನ್ನ ಮೇಲೆ ಉಂಟಾಗುವ ಎಲ್ಲಾ ಬಂಧನಗಳನ್ನು ಕಳಚಿಕೊಂಡು ಮುಕ್ತಳಾಗಿ ಸಹಜ ಬದುಕನ್ನು ಸ್ವೀಕರಿಸಿದ ಪರಿ ಅತ್ಯಂತ ವಿಶೇಷವಾದುದಾಗಿದೆ.

**ಕೊನೆ ಟಿಪ್ಪಣಿಗಳು**

1. ಬಸವರಾಜ ಕಟ್ಟೀಮನಿ. *ಗಿರಿಯ ನವಿಲು.* ಪುಟ.185–186
2. ತಿಪ್ಪೇರುದ್ರಸ್ವಾಮಿ ಎಚ್. *ಕದಳಿಯ ಕರ್ಪೂರ.* ಪುಟ.140

3. ಅದೇ. ಪುಟ. 140
4. ಜಗದ್ಗುರು ಮಾತೆ ಮಹಾದೇವಿ. *ತರಂಗಿಣಿ.* ಪುಟ.517
5. ಅದೇ. ಪುಟ.517
6. ಅದೇ. ಪುಟ.526
7. ಅದೇ. ಪುಟ.526–527
8. ರುದ್ರಮೂರ್ತಿಶಾಸ್ತ್ರಿ (ಸಂ.). *ಅಕ್ಕಮಹಾದೇವಿ.* ಪುಟ.54
9. ಅದೇ. ಪುಟ.74
10. ಅದೇ. ಪುಟ.105
11. ಲಕ್ಷ್ಮಣ ಕೌಂಟೆ. *ಮಹಾಸಂಗಮ.* ಪುಟ.159
12. ಜಗದೀಶ ವಿ.ಮಾ. *ರೂಹಿಲ್ಲದ ಚೆಜ್ಜಜರವಲುವ.* ಪುಟ.107
13. ಅನುಪಮಾ ಎಚ್.ಎಸ್. *ಬೆಳಗಿನೊಳಗು ಮಹಾದೇವಿಯಕ್ಕ.* ಪುಟ.134–135
14. ಅದೇ. ಪುಟ.273
15. ಅದೇ. ಪುಟ.275
16. ಅದೇ. ಪುಟ.290
17. ಅದೇ. ಪುಟ.294

**ಆಕರ ಗ್ರಂಥಗಳು**

- ಅನುಪಮ, ಎಸ್.ಎಸ್. (2022). *ಬೆಳಗಿನೊಳಗು ಮಹಾದೇವಿಯಕ್ಕ.* ಲಕ್ಷ್ಮೀಮುದ್ರಣಾಲಯ.
- ಬಸವರಾಜು ಕಟ್ಟಿಮನಿ. (1959). *ಗಿರಿಯನವಿಲು.* ಶಾರದಾ ಪ್ರಕಟನಾಲಯ.
- ಲಕ್ಷ್ಮಣ ಕೌಂಟೆ. (2020). *ಬಯಲ ಬನ್ನೇರಿ.* ಸಿದ್ಧಲಿಂಗೇಶ್ವರ ಪ್ರಕಾಶನ.
- ಮಾತೆಮಹಾದೇವಿ. (2012). *ತರಂಗಿಣಿ.* ವಿಶ್ವ ಕಲ್ಯಾಣ ಮಿಷನ್ ಬಸವಮಂಟಪ.
- ರುದ್ರಮೂರ್ತಿಶಾಸ್ತ್ರಿ. (2021). ಅಕ್ಕಮಹಾದೇವಿ. ಅಂಕಿತ ಪ್ರಕಾಶನ.
- ತಿಪ್ಪೇರುದ್ರಸ್ವಾಮಿ, ಎಚ್. (2009). *ಕದಳಿಯ ಕರ್ಪೂರ.* ಡಿ.ವಿ.ಕೆ. ಮೂರ್ತಿ ಪ್ರಕಾಶನ.

**ಪರಾಮರ್ಶನ ಗ್ರಂಥಗಳು**

- ಕಮಲಾ ಹಂಪನಾ. (2022). *ಅಕ್ಕಮಹಾದೇವಿ.* ಸಪ್ನ ಬುಕ್ ಹೌಸ್.
- ಕಾವ್ಯಶ್ರೀ, ಜಿ. (2015). *ವಚನಕಾರ್ತಿಯರು ಮತ್ತು ವೈಚಾರಿಕ ಪ್ರಜ್ಞೆ.* ಆದಿತ್ಯ ಪಬ್ಲಿಕೇಷನ್ಸ್.
- ಪ್ರಭಾಕರ ಲಕ್ಕೋಳ್. (2012). *ಪರಿಮಳದ ಉಸಿರು.* ಕಣ್ವ ಪ್ರಕಾಶನ.
- ವೀಣಾ ಬನ್ನಂಜೆ. (2021). *ಅಕ್ಕಮಹಾದೇವಿಯ ದ್ವೈತ.* ರವೀಂದ್ರ ಪುಸ್ತಕಾಲಯ.
- ಉಮಾಪತಿ, ಎಸ್. (2020). *ಅಕ್ಕಮಹಾದೇವಿ.* ಸ್ನೇಹ ಪ್ರಿಂಟರ್ಸ್.